ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
# ಹೊಸ ಸಾರ್ವಜನಿಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ: ಸಿ3(7)ಪ್ರಾ..ಶಿ:ವರ್ಗ:ವೈ.ತ:02/2016-17 ದಿನಾಂಕ:-17-8-2016

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆನಂದರಾವ್ ವೃತ್ತ,
ಬೆಂಗಳೂರು

ಮಾನ್ಯರೆ

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ [ಪತಿ ಅಥವಾ ಪತ್ನಿ, ಮಕ್ಕಳು] ಅವಲಂಬಿತರ ಪ್ರಕರಣಗಳಿಗೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಲು ಮತ್ತು ವಿಭಾಗ ಮಟ್ಟದ ತ್ರಿ-ಸದಸ್ಯ ಸಮಿತಿ ರಚಿಸಿ ವೈದ್ಯಕೀಯ ಪ್ರಮಾಣ ಪತ್ರದ ಸತ್ಯಾಸತ್ಯತೆಯ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಸಂಬಂಧಿತರಿಗೆ ನಿರ್ದೇಶನ ನೀಡುವಂತೆ ಕೋರಿ.

ಉಲ್ಲೇಖ:-ಈ ಕಚೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿವರ್ಗಾ01/16-17 ದಿ:01.8.2016

-*****-

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ 2007ರಡಿಯಲ್ಲಿ ರೂಪಸಲಾಗಿರುವ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು 2007' ಹಾಗೂ ತಿದ್ದುಪಡಿ ನಿಯಮಗಳು 2011ರಂತೆ ಪ್ರತಿ ವರ್ಷ ಶಿಕ್ಷಕರ ವರ್ಗಾವಣೆ ಮಾಡಲಾಗುತ್ತದೆ.

2. 2016-17ನೇ ಸಾಲಿನಲ್ಲಿ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಶಿಕ್ಷಕರ ವರ್ಗಾವಣೆ ಮಾಡುವ ಸಂಬಂಧ ಪೂರ್ವ ಸಿದ್ದತೆಯನ್ನು ಮಾಡಿಕೊಳ್ಳಲಾಗಿದ್ದು, ವರ್ಗಾವಣೆ ಪ್ರಕ್ರಿಯೆಗೆ ವೇಳಾಪಟ್ಟಿಯನ್ನು ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ).

3. **'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ 2007'**ರ ಪ್ರಕರಣ 6[2][4] ರಲ್ಲಿ 'ಒಬ್ಬ ಶಿಕ್ಷಕನು ಅಥವಾ ಅವನ/ಅವಳ, ಗಂಡ/ಹೆಂಡತಿಯು ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆಯ ಸ್ವರೂಪ, ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಕಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಬಗ್ಗೆ ಮತ್ತು ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಂತಹ ಸ್ಥಳಕ್ಕೆ ವರ್ಗಾವಣೆ ಬಯಸಲು ಅವಕಾಶವಿದೆ'. (ಕಾಯ್ದೆ ಪ್ರತಿ ಲಗತ್ತಿಸಿದೆ)

4. ವೈದ್ಯಕೀಯ ಕಾರಣ ನಿಮಿತ್ಯದ ವರ್ಗಾವಣೆ ಕೋರಿಕೆಗಳಿಗೆ, ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ, ಹೆಚ್.ಐ.ವಿ. ಕಾಯಿಲೆಗಳನ್ನು ಮಾತ್ರ ತೀವ್ರತರ ಕಾಯಿಲೆ ಎಂಬುದಾಗಿ ಪರಿಗಣಿಸಲಾಗುತ್ತಿದ್ದು ಈ ತೀವ್ರತರ ಕಾಯಿಲೆಯಿಂದ ಶಿಕ್ಷಕರು ಅಥವಾ ಅವರ ಅವಲಂಬಿತರು (ಅವಲಂಬಿತರು ಎಂದರೆ ಮೇಲಿನ ವ್ಯಾಖ್ಯಾನದಂತೆ ಮಾತ್ರ) ಬಳಲುತ್ತಿದ್ದಲ್ಲಿ ಮತ್ತು ಅವರು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ದೊರೆಯದ ಬಗ್ಗೆ ಮತ್ತು ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ. ಎಂಬುದರ ಬಗ್ಗೆ ನಿರ್ಧಿಷ್ಟವಾಗಿ ತಿಳಿಸಿರುವ 'ಜಿಲ್ಲಾ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಿಕ್ಷಕರು ಹಾಜರುಪಡಿಸದ ಹೊರತು ಅಂತಹ ವರ್ಗಾವಣೆಯನ್ನು ಮಾಡಲು ಅವಕಾಶವಿರುವುದಿಲ್ಲ. ಈಗಾಗಲೇ ಜಿಲ್ಲಾ ಉಪನಿರ್ದೇಶಕರುಗಳು ಸಂಬಂಧಿತ ಜಿಲ್ಲಾ

ಆಸ್ಪತ್ರೆಗಳನ್ನು ಸಂಪರ್ಕಿಸುತ್ತಿದ್ದಾರೆ. ಪ್ರಯುಕ್ತ, ದಯಮಾಡಿ ಜಿಲ್ಲಾ ಮಟ್ಟದಲ್ಲಿ ಅಂತಹ ಸ್ಥಾಯಿ ಮಂಡಳಿಗೆ ಸೂಕ್ತ ನಿರ್ದೇಶನವನ್ನು ತಮ್ಮ ಹಂತದಿಂದ ನೀಡಲು ಕೋರಿದೆ.

5. ಹಾಗೆಯೇ, ಈ ಹಿಂದಿನ ಸಾಲುಗಳಂತೆಯೇ, 2016-17ನೇ ಸಾಲಿನಲ್ಲಿಯೂ ಸಹ ವಿಭಾಗ ಮಟ್ಟದಲ್ಲಿ ವೈದ್ಯಾಧಿಕಾರಿಗಳ ತ್ರಿ-ಸದಸ್ಯ ಸಮಿತಿಯಿಂದ ಸದರಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರು ಅತ್ಯಂತ ತೀವ್ರತರ ಕಾಯಿಲೆಯಿಂದ (terminaly ill) (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹೆಚ್.ಐ.ವಿ. ಕಾಯಿಲೆಗಳಿಗೆ ಮಾತ್ರ) ಬಳಲುತ್ತಿರುವ ಬಗ್ಗೆ ಸಲ್ಲಿಸಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಕುರಿತಂತೆ, ವೈದ್ಯಕೀಯ ತಪಾಸಣೆ ನಡೆಸಿ ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಬೇಕಾಗಿದೆ. ಹಾಗೆಯೇ ದೈಹಿಕ ಅಂಗವಿಕಲತೆಯಿರುವ ಶಿಕ್ಷಕರ ಪ್ರಕರಣಗಳಲ್ಲಿ, ವಿಭಾಗೀಯ ಮಟ್ಟದಲ್ಲಿ ಪುನರ್ ವೈದ್ಯಕೀಯ ಪರಿಶೀಲನೆಗೆ ಒಳಪಡಿಸಿ ನೈಜತೆಯನ್ನು ಪರಿಶೀಲಿಸಿಕೊಳ್ಳಬೇಕಾಗಿದೆ.

ವೈದ್ಯಕೀಯ ದಾಖಲೆಗಳ ನೈಜತೆ ಹಾಗೂ ತೀವ್ರತರ ಕಾಯಿಲೆ ಸಂಬಂಧ ವೈದ್ಯಕೀಯ ತಪಾಸಣೆ ನಡೆಸಿ ವೈದ್ಯಕೀಯ ದೃಢೀಕರಣ ನಿಡುವಂತೆ ತಮ್ಮ ಇಲಾಖಾ ವತಿಯಿಂದ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗದ ವೈದ್ಯಕೀಯ ಮಂಡಳಿಗೆ ಸೂಚಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಸೌಜನ್ಯ ಭಾ.ಆ.ಸೇ)
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಕಛೇರಿ ಪ್ರತಿ.